MYSORE LEGISLATIVE ASSEMBLY

Tuesday, 1st August 1967.

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Price of Paddy

*Q.—296. Sri S. BANGARAPPA (Sorab).—

Will the Minister for Food and Civil Supplies be pleased to state :—

(*a*) whether it is not a fact that the market price of paddy in Sorab Taluk is Rs. 80 to Rs. 85 per quintal ;

(*b*) if so, whether they would increase the said rate and thus help the ryots during these hard days ?

A.—Sri B. D. JATTI (Minister for Food and Civil Supplies).—

(*a*) No.

(*b*) Does not arise in view of reply to clause (*a*).

ಶ್ರೀ ಎಸ್. ಬಂಗಾರಪ್ಪ.—ಸೊರಬ ತಾಲ್ಲೂಕಿನ ಮಾರುಕಟ್ಟೆಯಲ್ಲಿ ಈಗ ಬತ್ತದ ಬೆಲೆ ಕ್ವಿಂಟಾಲು ಒಂದಕ್ಕೆ 80 ರಿಂದ 85 ರೂಪಾಯಿಗಳಿಲ್ಲ ಎಂದು ಹೇಳಿದ್ದಾರೆ. ಹಾಗಾದರೆ ಈಗ ಮಾರುಕಟ್ಟೆಯಲ್ಲಿ ಸರ್ಕಾರದವರ ಬೆಲೆಗಿಂತ ಎಷ್ಟು ಹೆಚ್ಚಾಗಿದೆ ?

ಶ್ರೀ ಬಿ. ಡಿ. ಜತ್ತಿ.—ಓಪನ್ ಮಾರ್ಕೆಟ್ಟಿನಲ್ಲಿ ಜಾಸ್ತಿಯಾಗಿರಬಹುದು. ಆದರೆ ನನ್ನ ಇನ್‌ಫರ್‌ಮೇಷನ್ ಪ್ರಕಾರ ಈಗ 65 ರಿಂದ 75 ರವರೆಗಿದೆ ಎಂದು ತಿಳಿದು ಬಂದಿದೆ.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರದವರು ಈಗ ಕ್ವಿಂಟಾಲ್ ಒಂದಕ್ಕೆ 40—45 ರೂಪಾಯಿಗಳನ್ನು ನಿಗದಿ ಮಾಡಿರುವುದರಿಂದ, ತಾವು ಈಗ ಹೇಳಿದ ಬೆಲೆಯನ್ನೇ ತೆಗೆದುಕೊಂಡರೂ ರೈತನಿಗೆ ಕ್ವಿಂಟಾಲು ಒಂದಕ್ಕೆ 25—35 ರೂಪಾಯಿಗಳು ನಷ್ಟವಾಗುವುದರಿಂದ ಈ ಬೆಲೆಯನ್ನು ಏರಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುವರೇ ?

ಶ್ರೀ ಬಿ. ಡಿ. ಜತ್ತಿ.—ರೈತರಿಗೆ ನಷ್ಟವಾಗುತ್ತದೆಂದು ಬತ್ತದ ಬೆಲೆಯನ್ನು ಹೆಚ್ಚಿಸಿದರೆ ಕೊಂಡು ತಿನ್ನತಕ್ಕವರಿಗೂ ಕೊಳ್ಳುವ ಬೆಲೆ ಜಾಸ್ತಿಯಾಗುತ್ತದೆ. ಆದ್ದರಿಂದ ಮಾರತಕ್ಕವರು ಮತ್ತು ಕೊಳ್ಳತಕ್ಕವರು ಈ ಇಬ್ಬರನ್ನೂ ನೋಡಿ ಅದನ್ನು ಮಾಡಬೇಕು.

ಶ್ರೀ ಜಿ. ರಾಮೇಗೌಡ.—ಈಗಾಗಲೇ ತಾವು ಬೆಲೆಗಳನ್ನು ಹೆಚ್ಚಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಬರೆಯುತ್ತೇವೆಂದು ಹೇಳಿದ್ದೀರಿ. ಹಾಗೇನಾದರೂ ತಾವು ಬರೆದ ಬೆಲೆಗೆ ಒಪ್ಪಿ ಅವರಿಂದೇನಾದರೂ ಸೂಚನೆ ತಮಗೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಕೇಂದ್ರ ಸರಕಾರಕ್ಕೆ ಬರೆದು ಅವರ ಒಪ್ಪಿಗೆಯನ್ನು ಪಡೆದೇ ಎಲ್ಲಿ ಬೆಲೆ ಹೆಚ್ಚು ಮಾಡಬೇಕು ಎಲ್ಲಿ ಕಡಿಮೆ ಮಾಡಬೇಕು ಎನ್ನುವುದನ್ನು ಗೆಜೆಟ್ ನೋಟಿಫಿಕೇಷನ್ ಮೂಲಕ ಈಗಾಗಲೇ ಮಾಡಿದ್ದೇವೆ.

ಶ್ರೀ ಅಬ್ದುರ್ ಖುದ್ದೂಸ್ ಅನ್ಸಾರ್.—ಶಿವಮೊಗ್ಗ ಜಿಲ್ಲೆಯಲ್ಲಿ ಫುಡ್ ಕಾರ್ಪೋರೇಷನ್ನಿನವರು ಭತ್ತಕ್ಕೆ ಹೆಚ್ಚು ಬೆಲೆಯನ್ನು ಕೊಟ್ಟು ಕೊಂಡುಕೊಳ್ಳುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

Sri B. D. JATTI.—The food Corporation of India is authorised by the Government of Mysore to purchase paddy in the open market according to the prevalent price in the open market.

Distribution of Cauvery river water.

*Q.—373. Sri M. K. BOMMEGOWDA (K.R. Pet).—

Will the Minister for Public Works be pleased to state :—

(*a*) whether the Government of Mysore and Madras have entered into an agreement in the year 1924 about the distribution of the Cauvery river water ;

(*b*) how long that agreement is going to last ;

(*c*) whether the Government of Mysore has undertaken any Projects on the Cauvery and its tributary basin within the period of agreement ?

A.— Sri VEERENDRA PATIL (Minister for Public Works).—

(*a*) Yes.

(*b*) 1974.

(*c*) Yes.

ಶ್ರೀ ಎಂ. ಕೆ. ಬೊಮ್ಮೇಗೌಡ.—ಯಾವ ಯಾವ ಪ್ರಾಜೆಕ್ಟ್‌ಗಳನ್ನು ಕಾವೇರಿ ಹಾಗು ಅದರ ಟ್ರಿಬ್ಯೂಟರೀಸ್‌ಗಳಲ್ಲಿ ಮಾಡಬೇಕೆಂದು ಇದೆ ಮತ್ತು ಅವನ್ನು ಯಾವಾಗ ಮುಗಿಸಬೇಕೆಂದು ಇದ್ದೀರಿ?

ಶ್ರೀ ವೀರೇಂದ್ರ ಪಾಟೀಲ್.—ಪ್ರತಿಯೊಂದು ಪ್ರಾಜೆಕ್ಟ್ ಬಗ್ಗೆ ಈ ಮಾನ್ಯ ಸಭೆಯಲ್ಲಿ ಸವಿಸ್ತಾರವಾಗಿ ಇನ್‌ಫರ್‌ಮೇಷನ್ ಕೊಟ್ಟಿದ್ದೇನೆ. ಇದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಹೇಮಾವತಿ ಯೋಜನೆ ತೆಗೆದುಕೊಳ್ಳಲಾಗಿದೆ, ಸುವರ್ಣಾವತಿ ತೆಗೆದುಕೊಂಡಿದೆ, ಕಬಿನಿ ಯೋಜನೆ ತೆಗೆದುಕೊಂಡಿದೆ ಮತ್ತು ಇನ್ನೂ ಯಾವ ಯಾವುವು ಸಾಧ್ಯವೋ ಅವನ್ನೆಲ್ಲಾ ತೆಗೆದುಕೊಳ್ಳಬೇಕೆಂದು ಇದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಸುವರ್ಣಾವತಿ ಕಾವೇರಿಯಲ್ಲಿ ಬರುವುದಿಲ್ಲ. ಕಾವೇರಿ ಬೇಸಿನ್‌ನಲ್ಲಿ ಯಾವ ಯಾವ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಬೇಕೆಂದಿದ್ದೀರಿ ಮತ್ತು ಅವನ್ನು ಯಾವಾಗ ಮುಗಿಸಬೇಕೆಂದಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರಿಗೆ ಸುವರ್ಣಾವತಿ ಇಲ್ಲ ಎಂದು ಹೇಳುವುದು ಸರಿಯಲ್ಲ. ಸುವರ್ಣಾವತಿ ಕಾವೇರಿ ನದಿಯೊಳಗೆ ಬರುತ್ತದೆ. ಇದು ಒಂದು ಟ್ರಿಬ್ಯೂಟರಿ ಕಾವೇರಿ ನದಿಗೇ ಆಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಕಾವೇರಿ ನದಿಯ ಒಪ್ಪಂದವು 1924ರಲ್ಲಿ ಆಗಿರುವುದರಿಂದ 1956ರಲ್ಲಿ ರಾಜ್ಯಗಳ ಪುನರ್ವಿಂಗಡಣೆಯಾಗಿ ರಾಜ್ಯವು ವಿಶಾಲವಾಗಿರುವುದರಿಂದ ಹಿಂದೆ ಆದ ಒಪ್ಪಂದ ಸರಿಯಾಗಿಲ್ಲದಿರುವುದರಿಂದ ಅದನ್ನು ಪುನರ್ವಿಮರ್ಶೆ ಮಾಡುವುದು ಸೂಕ್ತ ಎಂದು ಸುದ್ದಾನ್ ಸರ್ಕಾರಕ್ಕೆ ತಿಳಿಸಲು ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ?